ಪ್ರಜಾವಾಣಿ

# ಜೈನ್ ಕಾಲೇಜು: ಎರಡು ನೂತನ ಕೋರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈನ್ ಕಾಲೇಜು ಮತ್ತು ಪೆಲಿಕಾನ್ ಬ್ರೈನ್ ಸಂಸ್ಥೆ ವತಿಯಿಂದ ಭಾರತದಲ್ಲಿ ಮೊದಲ ಬಾರಿಗೆ ಪದವಿ ವಿದ್ಯಾರ್ಥಿಗಳಿಗೆ 'ಡೇಟಾ ಅನಾಲಿಟಿಕ್' ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಒಂದು ವರ್ಷದ 'ಡಿಪ್ಲೊಮಾ ಇನ್ ಇನ್‌ಫಾರ್ಮೇಷನ್ ಟೆಕ್ನಾಲಜಿ' ಕೋರ್ಸ್ ಆರಂಭಿಸಲಾಗುವುದು' ಎಂದು ಪೆಲಿಕಾನ್ ಬ್ರೈನ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಕುಮಾರ್ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಕೋರ್ಸ್ ಆರಂಭವಾಗಲಿದ್ದು, ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ನೇರವಾಗಿ ಬಿ.ಸಿ.ಎ. ಪದವಿಯಲ್ಲಿ 'ಡೇಟಾ ಅನಾಲಿಟಿಕ್' ಹಾಗೂ ಡಿಪ್ಲೊಮಾ ಇನ್ ಇನ್‌ಫಾರ್ಮೇಷನ್ ಟೆಕ್ನಾಲಜಿ' ಕೋರ್ಸ್‌ನಲ್ಲಿ 'ಬಿಸಿನೆಸ್ ಟೆಕ್ನಾಲಜಿ ಮ್ಯಾನೇಜ್‌ಮೆಂಟ್' ವಿಷಯವನ್ನು ಅಧ್ಯಯನ ಮಾಡಬಹುದು. ಈ ಕೋರ್ಸ್‌ಗಳಲ್ಲಿ 60 ಸೀಟುಗಳು ಲಭ್ಯ ಇವೆ' ಎಂದರು.

'ಕಾರ್ಪೊರೇಟ್ ವಲಯದಲ್ಲಿ ಅಂಕಿ ಅಂಶ ತಜ್ಞರ ಪಾತ್ರ ಮಹತ್ತರವಾದುದು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಕೋರ್ಸ್ ಆರಂಭಿಸಲಾಗಿದೆ. ಇದೇ 31 ಮತ್ತು ಜೂನ್ 14 ರಂದು ಜಯನಗರದ ಜೈನ್ ಕಾಲೇಜು ಆವರಣದಲ್ಲಿ ಕೋರ್ಸ್ ಬಗ್ಗೆ ತಜ್ಞರಿಂದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ' ಎಂದರು. ಸಂಪರ್ಕಕ್ಕೆ: 99163 91234.